ಅಂದುಕೊಂಡೇ ಸಂದರ್ಶನಕ್ಕೆ ಹೋಗಿದ್ದೆ. ನಾನು ನಾನಾಗಿಯೇ ಹೋಗಿದ್ದೆ. ನಾನು ಎಂಥ ಡಾಕ್ಟು ಅನ್ನೋದು ಎಲ್ಲರಿಗೂ ಗೊತ್ತೇ ಇದೆ. ಆದರೆ ಬೆನಿಫಿಟ್ಸ್‌ನವರು ಹೇಳ್ತಾರೆ ನನ್ನದು ಪ್ರಿಎಕ್ಸಿಸ್ಟಿಂಗ್ ಕಂಡಿಶನ್ ಅಂತೆ, ಇದು ನನ್ನ ಪೂರ್ವನಿರ್ಧರಿತ ಸ್ಥಿತಿ. ಅಂದರೆ ನಾನು ಹೆಣ್ಣಾಗುತ್ತಿರುವ ಪ್ರಕ್ರಿಯೆ ಈ ವೆಸ್ಟ್‌ಹೆಲ್ತ್‌ನವರು ನಮ್ಮನ್ನು ಕೊಳ್ಳುವ ಮುಂಚೆಯೇ ನನ್ನಲ್ಲಿ ಶುರುವಾಗಿರುವುದರಿಂದ ಅವರು ನನ್ನ ಹಾರ್ಮೋನುಗಳ, ಸರ್ಜರಿಯ ಖರ್ಚನ್ನು ಕವರ್ ಮಾಡೊಲ್ಲವಂತೆ. ತಮಾಷಿಯೆಂದರೆ ಆಕೆ ನನಗೆ ಒಂದು ಸಲಹೆ ಕೊಟ್ಟಳು. ನೀನು ಸದ್ಯಕ್ಕೆ ನಿನಗೇಂತ ಒಂದು ಲಿಂಗವನ್ನು ಅಸೈನ್ ಮಾಡಿಕೋ, ದೇವರು ಕೊಟ್ಟಿರುವುದನ್ನೇ ಇಟ್ಟುಕೊಂಡು ನಮ್ಮ ಸಂಸ್ಥೆ ಸೇರಿಕೋ, ಒಂದು ವರ್ಷವಾದಮೇಲೆ ನೀನು ಈ ಟ್ರೀಟ್‌ಮೆಂಟ್ ಶುರುಮಾಡಿಕೊಂಡರೆ ಆಗ ನಿನ್ನ ಈ ಮೆಟಮಾರ್ಫಸಿಸ್ ಅನ್ನು ಪೂರಾ ನಾವೇ ಕವರ್ ಮಾಡುತ್ತೇವೆ' ಅಂದಳು.

'ಮಾರಿಸ್, ನನಗೆ ನಿಜವಾಗಿಯೂ ಅರ್ಥವಾಗುತ್ತಿಲ್ಲ.'

'ಮರ್ಯಾದೆ ಪ್ರಶ್ನೆ ಸೂರಿ. ಅಂದರೆ ನಾನು ಸದ್ಯಕ್ಕೆ ನಿನ್ನ ತರ ಹೇರ್‌ಕಟ್ ಮಾಡಿಸಿಕೊಂಡು ಸ್ಪಿರೊನೋಲಾಕ್ಟೋನ್ ನಿಲ್ಲಿಸಿ ಮತ್ತೆ ಗಂಡಾಗಿ ಒಂದು ವರ್ಷದ ನಂತರ ವೆಸ್ಟ್‌ಹೆಲ್ತ್ ಆಶ್ರಯದಲ್ಲಿ ಮತ್ತೆ ಹೆಣ್ಣಾಗಬೇಕು. ಆಗ ನನ್ನ ಸ್ಥಿತಿ ಈ ವೆಸ್ಟ್‌ಹೆಲ್ತ್‌ನವರಿಗೆ ಪ್ರಿಎಕ್ಸಿಸ್ಟಿಂಗ್ ಅಲ್ಲ. ಮತ್ತೆ ಅವರಿಗೂ ನಮ್ಮಂಥ ಎಡಬಿಡಂಗಿಗಳನ್ನು ಉದ್ಧಾರಮಾಡಿ ಆಶ್ರಯಕೊಟ್ಟರೋ ಧನ್ಯತೆ ಎಲ್ಲ ಪೂರ್ತಿ ಆಗುತ್ತೆ.'

'ಬರೇ ಹೇರ್ ಕಟ್ ಮಾಡಿಸಿಕೊಂಡು ಬಟ್ಟೆ ಬದಲಿಸಿದರೆ ಸಾಕಂತಾ?' ಅಷ್ಟೇ ಆದರೆ ಅದೇನು ಮಹಾ ಎಂಬ ಧ್ವನಿ ನನ್ನ ಮಾತಲ್ಲಿತ್ತಾ ಎಂದು ಆಮೇಲೆ ನನಗೇ ಅನಿಸಿತ್ತು.

ನಿಡುಸುಯ್ದ. ತನ್ನ ಬೆರಳುಗಳನ್ನೇ ನೋಡಿಕೊಂಡ. ಉಗುರಿಗೆ ಹಚ್ಚಿದ್ದ ನೇರಿಳೇ ಬಣ್ಣವನ್ನೊಮ್ಮೆ ಸವರಿಕೊಂಡು ಒಮ್ಮೆ ಉಗುರು ಕಚ್ಚಿಕೊಂಡ. ಎಷ್ಟೇ ನೀಳವೆನಿಸಿದ್ದರೂ ಮೆನಿಕ್ಯೂರಿನಿಂದ, ನೇಲ್‌ಪಾಲಿಶ್‌ನಿಂದ ಹೆಣ್ಣಾಗಬಯಸಿದ್ದರೂ ಇನ್ನೂ ಗಡುಸಾಗಿದ್ದ, ತೋರವಾಗಿದ್ದ ತನ್ನ ಬೆರಳುಗಳನ್ನು ತೋರಿಸಿದ. 'ನೋಡು ಸೂರಿ, ಈ ಹೆಣ್ಣಾಗಿಸುವ ಹಾರ್ಮೋನುಗಳು ಗಂಡುಮೂಳೆಗಳ ಮೇಲೆ, ಮುಖದಕೂದಲಿನ ಮೇಲೆ ಪರಿಣಾಮಬೀರುವುದಿಲ್ಲವಂತೆ. ಮುಖದ ಕೂದಲನ್ನು ಲೇಸರ್, ಎಲೆಕ್ಟ್ರಾಲಿಸಿಸ್ ಮಾಡಿಸಿದ್ದೇನೆ. ನನ್ನ ಧ್ವನಿ ಯಾವಾಗಲೂ ಗಡುಸಾಗಿಯೇ ಇರುತ್ತೆ, ನಾನೇ ಕೀರಲಾಗಿಸಲು ಪ್ರಯತ್ನ ಮಾಡುತ್ತೇನೆ. ಈ ನನ್ನ ಆಡಮ್ಸ್ ಆಪಲ್ ಇದ್ದೇ ಇರುತ್ತೆ. ಇಷ್ಟೆಲ್ಲಾ ಆದಮೇಲೂ ನನಗೆ ಸಿಕ್ಕಿರುವ ಹೆಣ್ಣುತನವೆಂದರೆ ಎರಡು ಸಣ್ಣ ಮೊಲೆಗಳು ಮತ್ತು ಹೆಣ್ಣುದೇಹದ ಅಂಕುಡೊಂಕು. ನಾನು ಇಡೀ ಜೀವನ ಗಂಡಸಿನ ದಿರಿಸು ಮಾತ್ರ ತೊಟ್ಟಿದ್ದೆ. ಈಗ ಈ ನನ್ನ ಹೆಣ್ಣುದಿರಿಸು, ಮತ್ತು ಮೇಕಪ್ಪು ಇವು ಮಾತ್ರ ನನ್ನನ್ನು ನನ್ನ ಮೈಯನ್ನು ವಿವರಿಸುತ್ತಿರುವುದು. ಇದು ಮೆಡಿಕಲ್ ಕಂಡಿಶನ್ ಅಲ್ಲ. ಅಂಡ್ ಗಾಡ್‌ಡಾಮ್ ಇಟ್, ನಾನು ಹೆಂಗಸೆನ್ನುವ ನನ್ನ ಮನಃಸ್ಥಿತಿ ಪ್ರಿಎಕ್ಸಿಸ್ಟಿಂಗ್ ಕಂಡಿಶನ್ ಆದರೆ ಅದು ನೀನು ಗಂಡಸೆಂಬ ಪ್ರಿಎಕ್ಸಿಸ್ಟಿಂಗ್ ಕಂಡಿಶನ್‌ಅಷ್ಟೇ ನಿಜ. ಬರೇ ಅಪ್ಲಿಕೇಶನ್‌ನ 'ಲಿಂಗ' ಕಾಲಮ್ಮಿನಲ್ಲಿ ಮೇಲಾ, ಫೇಮೇಲಾ, ಅಥ್ವಾ ಟ್ರಾನ್ಸ್ ಅಂತ ಒಂದಕ್ಕೆ ಸೊನ್ನೆ ಸುತ್ತಿದಷ್ಟು ಸುಲಭವಲ್ಲ, ಅದನ್ನು ಯಾರಿಗೆ ಹೇಗೆ ವಿವರಿಸಲಿ?'

ನಾನು ಅಯ್ಯೋ ಪಾಪ ಎನ್ನಲೋ, ಇವನನ್ನು ಇನ್ನೂ ಪ್ರಶ್ನೆ ಕೇಳಲೋ ಗೊತ್ತಾಗಲಿಲ್ಲ.

'ಸ್ಮೋಕಿ ಪರ್ವತಗಳಿಗೆ ಹೋಗಿದ್ದಿರಂತೆ, ಅಲ್ಲಿ ಸ್ಕೀ ಮಾಡಿದಿರಾ' ಎಂದು ಮಾತು ಮರೆಸಲು